**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂ:191/2013 ಪಿ.ಡಬ್ಲೂ: 01**

ಸಾಕ್ಷಿಯನ್ನು ಇಂದು ದಿನಾಂಕ: **02.01.2024** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು:** ಪ್ರತಿವಾದಿ ಪರ ಶ್ರೀ **ಕೆ.ಎಸ್.ಎಸ್** ವಕೀಲರಿಂದ:

ನಾನು ನ್ಯಾಯಾಲಯದಲ್ಲಿ ಯಾವ ಯಾವ ದಾಖಲೆಗಳನ್ನು ಇತ್ತೀಚೆಗೆ ಹಾಜರುಪಡಿಸಿರುತ್ತೇನೆ ಎನ್ನುವ ಮಾಹಿತಿ ನನಗೆ ಇರುವುದಿಲ್ಲ. ಸದರಿ ದಾಖಲೆಗಳನ್ನು ನನ್ನ ಮಗ ನನಗೆ ಕೊಟ್ಟಿರುತ್ತಾನೆ. ಸದರಿ ದಾಖಲೆಗಳನ್ನು ನನ್ನ ಮಗ ಎಲ್ಲಿಂದ ಹಾಗೂ ಹೇಗೆ ತಂದಿರುತ್ತಾನೆ ಎನ್ನುವುದನ್ನು ನಾನು ತಿಳಿದುಕೊಳ್ಳಲು ಪ್ರಯತ್ನಿಸಿರುವುದಿಲ್ಲ. ಸದರಿ ದಾಖಲೆಗಳು ಯಾವುದಕ್ಕೆ ಸಂಬಂಧಿಸಿರುತ್ತವೆ ಎನ್ನುವುದು ನನಗೆ ಓದಲು ಬರದ ಕಾರಣ ಗೊತ್ತಿರುವುದಿಲ್ಲ. ಯಾವ ಉದ್ದೇಶಕ್ಕಾಗಿ ನಿಪಿ-17 ರಿಂದ ನಿಪಿ-20 ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎನ್ನುವುದು ನನಗೆ ಗೊತ್ತಿರುವುದಿಲ್ಲ. ನಾನು ಹಾಜರುಪಡಿಸಿದ ನಿಪಿ-17 ರಿಂದ 20 ದಾಖಲೆಗಳ ಮೂಲ ದಾಖಲೆಗಳು ನನ್ನ ಬಳಿ ಇರುತ್ತವೆ ಎಂದರೆ ಸರಿ. ಸದರಿ ದಾಖಲೆಗಳ ಮೂಲ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುತ್ತದೆಯೇ ಎಂದರೆ ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ಹಾಕಿದ ನಂತರ ನಿಪಿ-17 ರಿಂದ 20 ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-17 ರಿಂದ 20 ದಾಖಲೆಗಳನ್ನು ಯಾವ ವರ್ಷ ಹಾಗೂ ಯಾವ ಇಲಾಖೆಗಳಿಂದ ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ-17 ರಿಂದ 20 ದಾಖಲೆಗಳನ್ನು ನೀಡಿದ ಬಾಬ್ತು ಸಂಬಂಧಪಟ್ಟ ಅಧಿಕಾರಿಯನ್ನು ವಿಚಾರಣೆಗೆ ಒಳಪಡಿಸಲು ನನಗೆ ತೊಂದರೆ ಇರುವುದಿಲ್ಲ.

ನಾನು ನಿಪಿ-17 ರಿಂದ 20 ಮೂಲ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡದಿದ್ದರೂ ಸಹ ಮಾಡಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ಈ ದಾವೆ ಹಾಕಿದ ನಂತರ ಸೃಷ್ಟಿ ಮಾಡಿದ ಕಾರಣ ಅದನ್ನು

ಮರೆಮಾಚುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂ.394 ಜಮೀನಿನಲ್ಲಿ ಒಂದೇ ಒಂದು ಪಂಪಸೇಟ್ ಇರುತ್ತದೆ ಎಂದರೆ ಸರಿ. ಸದರಿ ಜಮೀನಿನಲ್ಲಿರುವ ಪಂಪಸೇಟನನ್ನು ಪ್ರತಿವಾದಿಯು 2011 ರಲ್ಲಿಯೇ ಅಂದರೆ ಈ ದಾವೆಯನ್ನು ಸಲ್ಲಿಸುವ ಮುಂಚೆಯೇ ಅಕ್ರಮ ಸಕ್ರಮ ಮಾಡಿಕೊಂಡು ಸೂಕ್ತ ಹಣವನ್ನು ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಿದ ಬೋರವೆಲ್ ನನ್ನು ಕಬಳಿಸುವ ಉದ್ದೇಶದಿಂದ ನಾನು ಸುಳ್ಳು ದಾಖಲೆಗಳನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ:

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**